**All India Radio: Bangalore**
**National Bulletin In Kannada**
**24.05.2025 13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**24.05.2025 13.10 p.m.**

**<><><><>**

ಮುಖ್ಯಾಂಶಗಳು

1. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನೀತಿ ಆಯೋಗದ ೧೦ನೇ ಆಡಳಿತ ಮಂಡಳಿ ಸಭೆ
2. ಪಾಕಿಸ್ತಾನಕ್ಕೆ ೧೧ ಹೊಸ ಷರತ್ತುಗಳ ಮೇಲೆ ೨೦೨೫ರ ದ್ವಿತೀಯಾರ್ಧದಲ್ಲಿ ಐಎಂಎಫ್ ನಿಧಿ ಪರಿಶೀಲಿಸುವ ಸಾಧ್ಯತೆ
3. ಪ್ರಧಾನಿ ನರೇಂದ್ರ ಮೋದಿ ಅವರಿಂದ ಆಕಾಶವಾಣಿಯಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಮನ್ ಕಿ ಬಾತ್
4. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ ಜಾಗತಿಕ ಅರಿವು ಮೂಡಿಸಲು ವಿವಿಧ ದೇಶಗಳ ಪ್ರವಾಸದಲ್ಲಿ ಸರ್ವಪಕ್ಷ ನಿಯೋಗಗಳು
5. ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಫೈನಲ್ ಪ್ರವೇಶಿಸಿದ ಭಾರತದ ಕಿಡಂಬಿ ಶ್ರೀಕಾಂತ್

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ನವದೆಹಲಿಯಲ್ಲಿಂದು ನಡೆದ ನೀತಿ ಆಯೋಗದ ಹತ್ತನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿದರು. "೨೦೪೭ರ ವೇಳೆಗೆ ವಿಕಸಿತ ರಾಜ್ಯಕ್ಕಾಗಿ ವಿಕಸಿತ ಭಾರತ" ಎಂಬುದು ಈ ವರ್ಷದ ಧ್ಯೇಯವಾಕ್ಯವಾಗಿದೆ. ಇದೇ ವಿಷಯದ ಕುರಿತು ಆಡಳಿತ ಮಂಡಳಿಯ ಈ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಈ ಸಭೆ ಅಭಿವೃದ್ಧಿ ಪಥದಲ್ಲಿ ದೇಶ ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸಲು ಮತ್ತು ಭಾರತವನ್ನು ವಿಕಸಿತ ರಾಷ್ಟ್ರವನ್ನಾಗಿಸಲು ರಾಜ್ಯಗಳ ಪಾತ್ರದ ಬಗ್ಗೆ ಏಕತೆ ಮತ್ತು ಸಮನ್ವಯ ಸಾಧಿಸಲು ವೇದಿಕೆಯನ್ನು ಒದಗಿಸಿದೆ. ಉದ್ಯಮಶೀಲತೆಯನ್ನು ಉತ್ತೇಜಿಸುವುದು, ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸುವುದು ಮತ್ತು ದೇಶಾದ್ಯಾಂತ ಸುಸ್ಥಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕ್ರಮಗಳ ಕುರಿತು ಕೂಡ ಸಭೆಯಲ್ಲಿ ಚರ್ಚೆ ನಡೆಯಲಿದೆ. ಸಭೆಯಲ್ಲಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್,

ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು, ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಛತ್ತೀಸ್‌ಘಡ ಮುಖ್ಯಮಂತ್ರಿ ವಿಷ್ಣುದೇವ್ ಸಾಯಿ ಸೇರಿದಂತೆ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು, ಕೇಂದ್ರ ಸಚಿವರು, ನೀತಿ ಆಯೋಗದ ಉಪಾಧ್ಯಕ್ಷರು, ಸದಸ್ಯರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗವಹಿಸಿದ್ದಾರೆ.

<><><>

ಅಂತಾರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ೨೦೨೫ರ ದ್ವಿತೀಯಾರ್ಧದಲ್ಲಿ ಪಾಕಿಸ್ತಾನಕ್ಕೆ ಮುಂದಿನ ಹಣಕಾಸು ಪರಿಶೀಲನೆಯನ್ನು ನಡೆಸುವ ನಿರೀಕ್ಷೆಯಿದೆ. ೨೦೨೬ ರ ಹಣಕಾಸು ವರ್ಷದ ಬಜೆಟ್ ನಿಯಮಗಳ ಕುರಿತು ಒಪ್ಪಂದಕ್ಕೆ ಬರಲು ಪಾಕಿಸ್ತಾನದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುತ್ತಿದೆ ಎಂದು ಐಎಂಎಫ್ ಅಧಿಕೃತ ಹೇಳಿಕೆ ತಿಳಿಸಿದೆ. 'ಮುಂದಿನ ವಿಸ್ತೃತ ನಿಧಿ ಸೌಲಭ್ಯ - ಇಎಫ್‌ಎಫ್ ಮತ್ತು ಸ್ಥಿತಿಸ್ಥಾಪಕತ್ವ ಮತ್ತು ಸುಸ್ಥಿರತೆ ಸೌಲಭ್ಯ - ಆರ್‌ಎಸ್‌ಎಫ್ ವಿಮರ್ಶೆಗಳಿಗೆ ಸಂಬಂಧಿಸಿದ ಮುಂದಿನ ಕಾರ್ಯಾಚರಣೆಯನ್ನು ೨೦೨೫ರ ದ್ವಿತೀಯಾರ್ಧದಲ್ಲಿ ನಿರೀಕ್ಷಿಸಲಾಗಿದೆ" ಎಂದು ಐಎಂಎಫ್ ತಿಳಿಸಿದೆ.

<><><>

ಆಕಾಶವಾಣಿಯ ಜನಪ್ರಿಯ ಮಾಸಿಕ ಮನ್ ಕಿ ಬಾತ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಬೆಳಗ್ಗೆ ೧೧ ಗಂಟೆಗೆ ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೨ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ನೀವು ಈ ಕಾರ್ಯಕ್ರಮವನ್ನು ಕೇಳಬಹುದು.

<><><>

ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ ಜಾಗತಿಕ ಅರಿವು ಮೂಡಿಸಲು ವಿವಿಧ ದೇಶಗಳ ಪ್ರವಾಸದಲ್ಲಿ ಸರ್ವಪಕ್ಷ ನಿಯೋಗಗಳು ಇವೆ. ಅಮೆರಿಕ ಸೇರಿದಂತೆ ಐದು ದೇಶಗಳಲ್ಲಿ ರಾಜತಾಂತ್ರಿಕ ಪ್ರವಾಸದಲ್ಲಿರುವ ಬಹು-ಪಕ್ಷ ಭಾರತೀಯ ಸಂಸದೀಯ ನಿಯೋಗದ ನೇತೃತ್ವ

ವಹಿಸಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ನ್ಯೂಯಾರ್ಕ್‌ನಲ್ಲಿರುವ ೯/೧೧ ಸ್ಮಾರಕಕ್ಕೆ ಭೇಟಿ ನೀಡುವ ಮೂಲಕ ತಮ್ಮ ಪ್ರಯಾಣವನ್ನು ಪ್ರಾರಂಭಿಸುವ ಸಾಂಕೇತಿಕ ಮಹತ್ವವನ್ನು ಹೇಳಿದರು. ಈ ಸಂದರ್ಭದಲ್ಲಿ ಮಾತನಾಡಿದ ತರೂರ್, ಭಯೋತ್ಪಾದಕ ದಾಳಿಯನ್ನು ನಾವು ಹೇಗೆ ಎದುರಿಸಿದ್ದೇವೆ ಮತ್ತು ನಾವು ಹೇಗೆ ಕ್ರಮ ಕೈಗೊಂಡಿದ್ದೇವೆ ಎಂಬುದನ್ನು ಜನರಿಗೆ ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸುತ್ತೇವೆ" ಎಂದು ಹಿರಿಯ ಸಂಸದರು ಹೇಳಿದರು. ವಿವಿಧ ರಾಜಕೀಯ ಪಕ್ಷಗಳ ಸಂಸತ್ ಸದಸ್ಯರನ್ನು ಒಳಗೊಂಡ ತರೂರ್ ನೇತೃತ್ವದ ನಿಯೋಗವು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ದ್ವಿಪಕ್ಷೀಯ ಸಂಪರ್ಕದ ಅಪರೂಪದ ನಿದರ್ಶನವನ್ನು ಪ್ರತಿಬಿಂಬಿಸುತ್ತದೆ. ನಿಯೋಗವು ಮೇ ೨೫ ರಂದು ಗಯಾನಾ, ಮೇ ೨೮ ರಂದು ಪನಾಮ, ಮೇ ೨೯ ರಂದು ಕೊಲಂಬಿಯಾ, ಮೇ ೩೧ ರಂದು ಬ್ರೆಜಿಲ್ ಮತ್ತು ಜೂನ್ ೩ ರಂದು ಅಮೆರಿಕ. ಪ್ರತಿಯೊಂದು ದೇಶದಲ್ಲಿಯೂ, ಸಂಸದರು ತಮ್ಮ ಸಹವರ್ತಿಗಳು ಮತ್ತು ಸಮುದಾಯಗಳೊಂದಿಗೆ ಸಂವಹನ ನಡೆಸುವ ನಿರೀಕ್ಷೆಯಿದೆ. ಭಯೋತ್ಪಾದನೆಯ ವಿರುದ್ಧ ಭಾರತದ ಏಕೀಕೃತ ರಾಜಕೀಯ ನಿಲುವನ್ನು ತಿಳಿಸುವುದು ಮತ್ತು ಪಾಕಿಸ್ತಾನವನ್ನು ಹೊಣೆಗಾರರನ್ನಾಗಿ ಮಾಡಲು ಅಂತರರಾಷ್ಟ್ರೀಯ ಬೆಂಬಲವನ್ನು ಪಡೆಯುವುದು ನಿಯೋಗಗಳ ಗುರಿಯಾಗಿದೆ.

<><><><>

ಶಿವಸೇನಾ ಸಂಸದ ಶ್ರೀಕಾಂತ್ ಏಕನಾಥ್ ಶಿಂಧೆ ನೇತೃತ್ವದ ಭಾರತದ ಉನ್ನತ ಮಟ್ಟದ ಸರ್ವಪಕ್ಷ ನಿಯೋಗವು ಇಂದು ಯುನೈಟೆಡ್ ಅರಬ್ ಎಮಿರೇಟ್ಸ್ ಗೆ ತನ್ನ ಯಶಸ್ವಿ ಭೇಟಿಯನ್ನು ಮುಕ್ತಾಯಗೊಳಿಸಿದೆ, ಇದು ಆಪರೇಷನ್ ಸಿಂದೂರ್‌ನ ಜಾಗತಿಕ ಸಂಪರ್ಕ ಅಭಿಯಾನದ ಅಡಿಯಲ್ಲಿ ಭಯೋತ್ಪಾದನೆಯನ್ನು ಎದುರಿಸುವಲ್ಲಿ ದ್ವಿಪಕ್ಷೀಯ ಸಹಕಾರವನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಭಾರತ-ಯುಎಇ ಸಹಕಾರವನ್ನು ಅದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ಮತ್ತಷ್ಟು ಬಲಪಡಿಸುತ್ತದೆ" ಎಂದು ಯುಎಇಯಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ತಿಳಿಸಿದೆ.

<><><><>

ಭಯೋತ್ಪಾದನೆ ವಿರುದ್ಧ ಉನ್ನತ ಮಟ್ಟದ ರಾಜತಾಂತ್ರಿಕ ಜಾಗತಿಕ ಸಂಪರ್ಕ ಕಾರ್ಯಾಚರಣೆಯ ಭಾಗವಾಗಿ ಬಿಜೆಪಿ ಸಂಸದ ಬೈಜಯಂತ್ ಜಯ ಪಾಂಡಾ ನೇತೃತ್ವದ ಸರ್ವಪಕ್ಷ ಭಾರತೀಯ ಸಂಸದೀಯ ನಿಯೋಗವು ಬಹ್ರೇನ್‌ಗೆ ತಲುಪಿದೆ. ಭಾರತದ ಸಂಬಂಧಗಳನ್ನು ಬಲಪಡಿಸುವ ಮತ್ತು

ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧ ದೇಶದ ದೃಢ ನಿಲುವನ್ನು ಬಿಂಬಿಸುವ ಗುರಿಯನ್ನು ಹೊಂದಿರುವ ಈ ಭೇಟಿಯು ಬಹ್ರೇನ್, ಕುವೈತ್, ಸೌದಿ ಅರೇಬಿಯಾ ಮತ್ತು ಅಲ್ಜೀರಿಯಾದಾದ್ಯಂತ ಬಹುರಾಷ್ಟ್ರಗಳ ಪ್ರವಾಸದ ಆರಂಭವನ್ನು ಸೂಚಿಸುತ್ತದೆ. ಬಹ್ರೇನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಅಯೋಗದ ಆಗಮನವನ್ನು ದೃಢಪಡಿಸಿದೆ ನಿಯೋಗವನ್ನು ವಿಮಾನ ನಿಲ್ದಾಣದಲ್ಲಿ ರಾಯಭಾರಿ ವಿನೋದ್ ಕೆ. ಜಾಕೋಬ್ ಬರಮಾಡಿಕೊಂಡರು." ನಿರ್ಗಮನಕ್ಕೂ ಮುನ್ನ, ಜೇ ಪಾಂಡಾ  ನಿಯೋಗವು ಭಾರತವು ಜಗತ್ತಿಗೆ ಪ್ರದರ್ಶಿಸಿರುವ ಮತ್ತು ಪ್ರದರ್ಶಿಸುತ್ತಿರುವ ಏಕತೆಯೇ ಪ್ರಮುಖ ಸಂದೇಶವಾಗಿದೆ. ಯುದ್ಧಭೂಮಿಯಲ್ಲಿ ವಿಜಯ ಸಾಧಿಸಿದ ನಂತರ, ಅನೇಕ ದೇಶಗಳು ಅನುಭವಿಸಿರುವ ಭಯೋತ್ಪಾದನೆಯ ಮೇಲೆ ಗಮನಹರಿಸುವಂತೆ ಜಗತ್ತನ್ನು ಒತ್ತಾಯಿಸುವುದು ಅಷ್ಟೇ ಮುಖ್ಯ ಎಂದು ತಿಳಿಸಲು ನಾವು ಬದ್ಧರಾಗಿದ್ದೇವೆ" ಎಂದು ಅವರು ಹೇಳಿದರು.

<><><>

ಭಯೋತ್ಪಾದನೆಯ ವಿರುದ್ಧದ ಭಾರತದ ಹೋರಾಟ ಮತ್ತು ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕಿಗೆ ಜರ್ಮನಿ ನೀಡಿದ ಬೆಂಬಲಕ್ಕೆ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಕೃತಜ್ಞತೆ ಸಲ್ಲಿಸಿದ್ದಾರೆ. ಜರ್ಮನಿಯ ಬರ್ಲಿನ್‌ನಲ್ಲಿರುವ ಜರ್ಮನ್ ಕೌನ್ಸಿಲ್ ಆನ್ ಫಾರಿನ್ ರಿಲೇಶನ್ಸ್‌ನಲ್ಲಿ ನಡೆದ ಸಂವಾದವನ್ನುದ್ದೇಶಿಸಿ ಮಾತನಾಡಿದ ಡಾ. ಜೈಶಂಕರ್, ಜರ್ಮನಿಯ ಭಯೋತ್ಪಾದಕ ದಾಳಿಯನ್ನು ಬಹಳ ಬೇಗನೆ ಖಂಡಿಸಿದ್ದು ಮತ್ತು ತನ್ನನ್ನು ತಾನು ರಕ್ಷಿಸಿಕೊಳ್ಳುವ ಭಾರತದ ಹಕ್ಕನ್ನು ಜರ್ಮನಿ ಗುರುತಿಸುತ್ತದೆ ಎಂಬ ವಿದೇಶಾಂಗ ಸಚಿವ ಜೋಹಾನ್ ವಾಡೆಫುಲ್ ಅವರ ಸ್ಪಷ್ಟ ಸಂದೇಶದಿಂದ ಭಾರತವು ಉತ್ತೇಜಿತವಾಗಿದೆ ಎಂದು ಹೇಳಿದರು.

<><><>

ಮಣಿಪುರದಲ್ಲಿ, ಈ ತಿಂಗಳ ೨೦ ರಂದು ಪ್ರಾರಂಭವಾದ ರಾಜ್ಯ ಮಟ್ಟದ ಶಿರುಯಿ ಲಿಲಿ ಉತ್ಸವ ೨೦೨೫ ರ ಐದನೇ ಆವೃತ್ತಿಯು ಇಂದು ಸಂಜೆ ಉಖ್ರುಲ್ ಜಿಲ್ಲೆಯ ಬಕ್ಷಿ ಮೈದಾನದಲ್ಲಿ ಮುಕ್ತಾಯಗೊಳ್ಳಲಿದೆ. ಶಿರುಯಿ ಲಿಲಿ ಸಸ್ಯದ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸಲಾದ ೫ ದಿನಗಳ ಉತ್ಸವವು ರಾಜ್ಯದ ಶ್ರೀಮಂತ ಸಂಸ್ಕೃತಿಗಳನ್ನು ಪ್ರದರ್ಶಿಸಿತು. ಇಂದು ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮಗಳು, ಚಲನಚಿತ್ರ ಪ್ರದರ್ಶನಗಳು, ಫುಟ್ಬಾಲ್ ಫೈನಲ್ ಪಂದ್ಯ

ಮತ್ತು ಇತರ ಹಲವು ಕಾರ್ಯಕ್ರಮಗಳು ನಡೆಯಲಿವೆ. ಪ್ರವಾಸೋದ್ಯಮ ಮಹಾನಿರ್ದೇಶಕ ಸುಮನ್ ಬಿಲ್ಲಾ ಸೇರಿದಂತೆ ಇತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

<><><>

ಜೂನ್ ೨೧ ರಂದು ೨೦೨೫ ರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪೂರ್ವಭಾವಿಯಾಗಿ, ಲಡಾಖ್ ಕೇಂದ್ರಾಡಳಿತ ಪ್ರದೇಶ ಆಡಳಿತವು ಜೂನ್ ೧೫ ರಿಂದ ೨೧ ರವರೆಗೆ ಲಡಾಖ್‌ನಲ್ಲಿ ವಾರಪೂರ್ತಿ ಅಂತರರಾಷ್ಟ್ರೀಯ ಯೋಗ ಮತ್ತು ಧ್ಯಾನ ಉತ್ಸವ ಎಂಬ ಶೀರ್ಷಿಕೆಯಡಿಯಲ್ಲಿ ಒಂದು ವಾರದ ಯೋಗ ಉತ್ಸವವನ್ನು ಹಲವು ಸ್ಥಳಗಳಲ್ಲಿ ಆಚರಿಸಲು ನಿರ್ಧರಿಸಿದೆ. ಪ್ಯಾಂಗೊಂಗ್ ಸರೋವರ, ಶಾಂತಿ ಸ್ತೂಪ, ಸಿಂಧು ಘಾಟ್‌ನಲ್ಲಿರುವ ಸಿಂಧೂ ನದಿಯ ದಂಡೆ ಮತ್ತು ನುಬ್ರಾ ಕಣಿವೆ ಸೇರಿದಂತೆ ಲಡಾಖ್‌ನ ಏಳು ಸುಂದರ ಮತ್ತು ಪ್ರಶಾಂತ ಸ್ಥಳಗಳನ್ನು ವಾರದ ಯೋಗ ಉತ್ಸವಕ್ಕಾಗಿ ಆಯ್ಕೆ ಮಾಡಲಾಗಿದೆ. ಲಡಾಖ್‌ನ ಅತ್ಯಂತ ಸುಂದರವಾದ ಸ್ಥಳಗಳಲ್ಲಿ ಆಚರಣೆಯ ನಂತರ, ಈ ಉತ್ಸವವು ದೇಶದ ಅತಿ ಎತ್ತರದ ಫುಟ್‌ಬಾಲ್ ಕ್ರೀಡಾಂಗಣ ಎಂದು ಜನಪ್ರಿಯವಾಗಿರುವ ಆಸ್ಟ್ರೋ ಟರ್ಫ್ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯೊಂದಿಗೆ ಮುಕ್ತಾಯಗೊಳ್ಳಲು ಯೋಜಿಸಲಾಗಿದೆ.

<><><>

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಶಟ್ಲರ್ ಕಿಡಂಬಿ ಶ್ರೀಕಾಂತ್ ಫೈನಲ್ ಪ್ರವೇಶಿಸಿದ್ದಾರೆ. ಇಂದು ನಡೆದ ಸೆಮಿಫೈನಲ್ ಪಂದ್ಯದಲ್ಲಿ ಅವರು ಜಪಾನ್‌ನ ಯುಶಿ ತನಕಾ ಅವರನ್ನು ೨೧-೧೮, ೨೪-೨೨ ನೇರ ಸೆಟ್ ಗಳಿಂದ ಮಣಿಸಿ ಫೈನಲ್‌ಗೆ ಲಗ್ಗೆ ಇಟ್ಟರು.

<><><>

ಜೈಪುರದ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>